ವಿಷಯ (ಧ) ಬಾಗಲಕೋಟೆ ಜಿಲ್ಲೆಯಲ್ಲಿ ಸಬ್ಸಿಡಿ ಬೀಜಗಳ ಪೂರೈಕೆ

ಶ್ರೀ ಮುರುಗೇಶ್ ಆರ್ ನಿರಾಣಿ (ಬೀಳಗಿ) ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆಯಲ್ಲಿ ಚೆನ್ನಾಗಿ ಮಳೆಯಾಗಿರುವುದರಿಂದ ಸಬ್ಸಿಡಿ ಬೀಜಗಳು ಒಂದು ಕೋಟಿ 86 ಲಕ್ಷ ರೂಗಳಷ್ಟು ಕೊಟ್ಟಿದ್ದರು ಅದು ಪೂರ್ತಿ ಮುಗಿದುಹೋಗಿರುತ್ತದೆ ಪುನಃ ಸಬ್ಸಿಡಿ ದರದಲ್ಲಿ ಬೀಜಗಳು ಸಿಗುತ್ತಿಲ್ಲ ಇದೇ ರೀತಿಯಾಗಿ ಬೇರೆ ಬೇರೆ ಜಿಲ್ಲೆಗಳಲ್ಲಿ 4 ರಿಂದ 5 ಕೋಟಿ ರೂಗಳಷ್ಟು ಸಬ್ಸಿಡಿ ಹಣವನ್ನು ಕೊಟ್ಟಿದ್ದಾರೆ, ಆದರೆ ಬಾಗಲಕೋಟೆ ಜಿಲ್ಲೆಯಲಿಲ್ಲ ಒಂದು ಕೋಟಿ 50 ಲಕ್ಷ ರೂಪಾಯಿಗಳ ಸಬ್ಸಿಡಿ ದರದಲ್ಲಿ ಬೀಜಗಳನ್ನೂ ರೈತರಿಗೆ ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ಇದರ ಬಗ್ಗೆ ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟಿದ್ದೇವೆ ನಿಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ದೇಶಪಾಂಡೆಗಳು, ನಾಡಗೌಡರುಗಳು, ದೇಸಾಯಿಯವರುಗಳು ಬಹಳ ಇರುವುದರಿಂದ ಅಲ್ಲಿ ಸಣ್ಣ ಹಿಡುವಳಿಗಾರರು, ಅತಿ ಸಣ್ಣ ಹಿಡುವಳಿದಾರರು ಬಹಲ ಕಡಿಮೆ ಇರುತ್ತಾರೆ ಯಾವ ಯಾವ ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಹಾಗೂ ಅತಿ ಸಣ್ಣ ಹಿಡುವಳಿದಾರರು ಇರುತ್ತಾರೆ, ಅದರ ದಾಮಾಂಶದ ಪ್ರಕಾರವಾಗಿ ಅನುಪಾತಕ್ಕೆ ಅನುಗುಣವಾಗಿ ಹನ ಬಿಡುಗಡೆಯಾಗಿದೆ. ತಾವು ಹೇಳಿದ ಪ್ರಕಾರ 1 ಕೋಟಿ 80 ಲಕ್ಷರೂಗಳು ಏನು ಬಿಡುಗಡೆಯಾಗಿದೆ, ಅದು ಬಹಳ ಕಡಿಮೆಯಾಗಿದೆ, ಈ ವಿಚಾರದಲ್ಲಿ ಸರ್ಕಾರ 50 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಅದಕ್ಕಿಂತಲೂ ಹೆಚ್ಚು ಹಣವನ್ನು ಕೊಡಬೇಕೆಂದು ಮಾನ್ಯ ಹಣಕಾಸಿನ ಸಚಿವರೊಂದಿಗೆ ಮಾತನಾಡಿ ಇದಕ್ಕೆ ಸರಿಯಾದಂತಹ ರೀತಿಯಲ್ಲಿ ಸರ್ಕಾರ ಸ್ಪಂದಿಸುತ್ತದೆ ಎಂಬ ಮಾತನ್ನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ

ವಿಷಯ (ಧ) ಸೂಳೆಕೆರೆಯಲ್ಲಿರುವ ಹೂಳು ತೆಗೆಯುವ ಬಗ್ಗೆ

ಶ್ರೀ ಮಹಿಮ ಜೆ ಪಟೇಲ್ (ಚನ್ನಗಿರಿ) ಮಾನ್ಯ ಅಧ್ಯಕ್ಷರೆ, ಪ್ರಪಂಚದಲ್ಲಿ ಅತ್ಯಂತ ಸೂಕ್ಷ್ಮ ಪ್ರದೇಶಗಳು, ಪರಿಸರದ ಸಮತೋಲನ ದೃಷ್ಟಿಯಲ್ಲಿ ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಪಶ್ಚಿಮ ಘಟ್ಟಗಳನ್ನು ಪ್ರಪಂಚದ 5ನೇ ಅತಿ ಸೂಕ್ಷ್ಮ ಪ್ರದೇಶವೆಂದು ಹೇಳಿ ಈಗಾಗಲೇ ಗುರುತುಮಾಡಿದ್ದಾರೆ ಕಳೆದ 25–30 ವರ್ಷಗಳಿಂದ ಅಲ್ಲಿ ಅವ್ಯಾಹತವಾಗಿ ಗಣಿಗಾರಿಕೆ ನಡೆದು ಅದರಿಂದಾಗಿ ತುಂಗಭದ್ರ ನದಿಗಳು ಹರಿಯುವುದರ ಮೇಲೆ ಸಾಕಷ್ಟು ಪರಿಣಾಮವಾಗಿದೆ, ಏಕೆಂದರೆ ಪಶ್ಚಿಮಘಟ್ಟದಲ್ಲಿರುವ ಆ ಬೆಟ್ಟಗಳು, ಮಳೆಗಾಲದಲ್ಲಿ ನೀರನ್ನು ಹಿಡಿದಿಟ್ಟು ಬೇಸಿಗೆಯ ಕಾಲದಲ್ಲಿಯೂ ಕೂಡ ನದಿಗಳಿಗೆ ನೀರನ್ನು ಬಿಟ್ಟುಕೊಡುವಂತಹದ್ದು ಈಗ ಗಣಿಗಾರಿಕೆಯ ಪ್ರಾರಂಭವಾದ ಮೇಲೆ ಭದ್ರಾ ಜಲಾಶಯವಿರಬಹುದು, ತುಂಗಭದ್ರಾ ಜಲಾಶಯ ಈ ತರಹದ ಎಲ್ಲಾ ಜಲಾಶಯಗಳಲ್ಲಿ ಹೂಳು ತುಂಬಿ ಸಾಕಷ್ಟು ಪರಿಸರದ ಅಸಮತೋಲನವುಂಟಾಗುತ್ತದೆ ಇಷ್ಟೆಲ್ಲಾ ಆಸಗ್ಯೂ ಕೂಡ ಪರಿಸರವಾದಿಗಳಾದ ಪ್ರೊ ಯು ಆರ್ ಅನಂತಮೂರ್ತಿಯವರು, ನಮ್ಮ ಈಗಿನ ಸಂಸದೀಯ ಮಂಡಳಿಯ ಸಚಿವರಾದ ಶ್ರೀ ಎಂ ಪಿ ಪ್ರಕಾಶ್‌ರವರು ಅವರೂ ಕೂಡ ಈ ತುಂಗಭದ್ರಾ ನದಿಗಳನ್ನು ಉಳಿಸಬೇಕೆಂದು ಹಿಂದೆ ಹೋರಾಟ ಮಾಡಿದ್ದರು ಆಗ ಸರ್ಕಾರ ಈ ವಿಚಾರದ ಬಗ್ಗೆ ಎಚ್ಚೆತ್ತು ಈ ಗಣಿಗಾರಿಕೆಯನ್ನು 3–4 ವರ್ಷಗಳಲ್ಲಿ ನಿಲ್ಲಿಸಬೇಕು ಎಂಬ ಆದೇಶವನ್ನು ಹೊರಡಿಸಲಾಗಿದೆ ಇತ್ತೀಚೆಗೆ ಮತ್ತೆ ಕೊಡಚಾದ್ರಿ ಬೆಟ್ಟಗಳ ಬಳಿ ಮ್ಯಾಂಗನೀಸ್‌ನ್ನು ತೆಗೆಯಬೇಕೆಂದು ತಮಿಳುನಾಡಿನ ಒಂದು ಕಂಪನಿಯವರು ಯಾವಾಗಲೂ ರಾತ್ರೋರಾತ್ರಿ ಬಂದು ಕೆಲಸವನ್ನು ಪ್ರಾರಂಭ ಮಾಡಿ ಮತ್ತೆ ಗಲಾಟೆಯನ್ನು ಮಾಡಿದ ಮೇಲೆ